**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.** **ದಿಃ26.08.2023.**

**ಪಾಟೀಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್ ಎಸ್ ಎಸ್ ವಕೀಲರಿಂದಃ**

4. ನಾನು ಡಿಪ್ಲೋಮಾ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ತಾಯಿಯವರಿಗೆ ನಾವು ಒಟ್ಟು 9 ಜನ ಮಕ್ಕಳು. ನನ್ನ ತಾಯಿಯ ಹೆಸರು ಸಂಗಮ್ಮ. ನನ್ನ ತಾಯಿಯ ಜನನ ಯಾವಾಗ ಆಗಿರುತ್ತದೆ ಎಂದು ನನಗೆ ಸರಿಯಾಗಿ ಗೊತ್ತಿರುವುದಿಲ್ಲ. ನನ್ನ ತಾಯಿಯವರು 7 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಹೇಳಿರುತ್ತಾರೆ. ನನ್ನ ತಾಯಿಯ ವಿಧ್ಯಾಭ್ಯಾಸದ ಬಗ್ಗೆ ಪ್ರಮಾಣ ಪತ್ರವನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ತಾಯಿಯ ವಿವಾಹವು ಎಷ್ಟನೇ ವರ್ಷದಲ್ಲಿ ಆಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ.

5. ನನ್ನ ಅಜ್ಜಿಯ ಹೆಸರು ಕರಿಬಸಮ್ಮ ಎಂದರೆ ನಿಜ. ಸದರಿಯವರು ಈ ವ್ಯಾಜ್ಯದಲ್ಲಿ ವಾದಿಯಾಗಿರುತ್ತಾರೆ ಎಂದರೆ ನಿಜ. ನನ್ನ ಅಜ್ಜಿಗೆ ಎಷ್ಟು ಜನ ಮಕ್ಕಳು ಎಂದರೆ ನನ್ನ ಅಜ್ಜಿ ಕರಿಬಸಮ್ಮ ರವರಿಗೆ ನನ್ನ ತಾಯಿ ಸಂಗಮ್ಮ ಒಬ್ಬಳೇ ಮಗಳು. ನನ್ನ ಅಜ್ಜಿ ಕರಿಬಸಮ್ಮ ರವರು ಎಲ್ಲಿಯ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಅಜ್ಜಿ ಕರಿಬಸಮ್ಮ ಎಷ್ಟನೇ ವರ್ಷದಲ್ಲಿ ಮದುವೆಯಾಗಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ಅಜ್ಜಿ ಕರಿಬಸಮ್ಮ ಪ್ರತಿವಾದಿಯರ ತಂದೆ ಎಸ್.ಬಿ. ಬಸವಣ್ಯಪ್ಪ ರವರನ್ನು ವಿವಾಹ ಆದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಅಜ್ಜಿ ಕರಿಬಸಮ್ಮ ಪ್ರತಿವಾದಿಯರ ತಂದೆ ಎಸ್. ಬಿ. ಬಸವಣ್ಯಪ್ಪ ರವರ ಧರ್ಮ ಪತ್ನಿ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನನ್ನ ಅಜ್ಜಿ ಕರಿಬಸಮ್ಮ ರವರಿಗೆ ಸಂಬಂಧಪಟ್ಟ ಪಡಿತರ ಚೀಟಿ, ಮತದಾರರ ಚೀಟಿ ಅಥವಾ ಅಧಾರ್ ಕಾರ್ಡ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಪಡಿತರ ಚೀಟಿಯನ್ನು ಹಾಜರುಪಡಿಸಿರುತ್ತೇನೆ ಮತದಾರರ ಚೀಟಿಯನ್ನು ಹಾಜರುಪಡಿಸಬಹುದು.

6. ಪ್ರತಿವಾದಿಗಳ ತಂದೆ ನನ್ನ ತಾಯಿಯ ತಂದೆ ಎಂದು ತೋರಿಸಲು ನನ್ನ ತಾಯಿಯ ಜನನ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಅದರೆ ಸದರಿ ದಾಖಲೆಯನ್ನು ಹಾಜರುಪಡಿಸಬಹುದು. ವಾದಿ ಕರಿಬಸಮ್ಮ ರವರು ಸರ್ಕಾರಿ ಪದವಿ ಪೂರ್ವ ಕಾಲೇಜು ಸೊರಬದಲ್ಲಿ ನಾಲ್ಕನೇ ದರ್ಜೆ ನೌಖರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ದಿನಾಂಕ 01.11.1961 ರಲ್ಲಿ ಸದರಿ ವಾದಿ ಕರಿಬಸಮ್ಮ ರವರು ಸದರಿ ಕೆಲಸಕ್ಕೆ ನೇಮಕವಾಗಿರುತ್ತಾರೆ ಎಂದರೆ ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ. ದಿನಾಂಕ 31.12.1995 ರಲ್ಲಿ ಸದರಿ ವಾದಿ ಕರಿಬಸಮ್ಮ ರವರು ಸದರಿ ಕೆಲಸದಿಂದ ವಯೋನಿವೃತ್ತಿ ಹೊಂದಿರುತ್ತಾರೆ ಎಂದರೆ ನಿಜ. ಸದರಿ ವಾದಿ ಕರಿಬಸಮ್ಮ ರವರ ಸೇವ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಅದರೆ ಹಾಜರುಪಡಿಸಬಹುದು.

7. ಪ್ರತಿವಾದಿಗಳ ಕುಟುಂಬದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಪ್ರತಿವಾದಿಗಳಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯಂದಿರು ಎಂದರೆ ಪ್ರತಿವಾದಿಗಳು ಒಟ್ಟು 3 ಜನ ಸಹೋದರ ಸಹೋದರಿಯರು ಆ ಪೈಕಿ ಪ್ರತಿವಾದಿಗಳು 1 ಮತ್ತು 2 ಸಹೋದರರು. ಪ್ರತಿವಾದಿಗಳಿಗೆ ಶಂಕರಮ್ಮ ಎಂಬ ಒಬ್ಬಳು ಅಕ್ಕ ಇದ್ದಳು ಎಂದರೆ ನಿಜ. ಸದರಿ ಶಂಕರಮ್ಮ ರವರಿಗೆ ಮಕ್ಕಳು ಇರುತ್ತಾರೆ ಎಂದರೆ ನಿಜ. ಸದರಿ ಶಂಕರಮ್ಮ ರವರ ಮಕ್ಕಳನ್ನು ಈ ವ್ಯಾಜ್ಯದಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ದಿನಾಂಕ 04.12.1951 ರಲ್ಲಿ ಸದರಿ ಶಂಕರಮ್ಮ ರವರು ಜನಿಸಿರುತ್ತಾರೆ ಎಂದರೆ ಇರಬಹುದು. 1 ನೇ ಪ್ರತಿವಾದಿ ದಿನಾಂಕ 11.10.1955 ರಲ್ಲಿ ಜನಿಸಿರುತ್ತಾರೆ ಎಂದರೆ ಇರಬಹುದು.

8. ದಾವಾ ಎ ಶೆಡ್ಯೂಲ್ ನ ಐಟಂ ನಂ.1 ರಿಂದ 3 ಆಸ್ತಿಯು ಪ್ರತಿವಾದಿಗಳ ತಂದೆ ಬಸವಣ್ಯಪ್ಪ ರವರಿಗೆ ಸೇರಿದ ಆಸ್ತಿ ಎಂದು ತೋರಿಸಲು ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದು ಆ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಎ ಶೆಡ್ಯೂಲ್ ನ ಐಟಂ ನಂ.1 ರಿಂದ 3 ಆಸ್ತಿಯಗಳು ಪ್ರತಿವಾದಿಗಳ ತಂದೆ ಬಸವಣ್ಯಪ್ಪ ರವರಿಗೆ ಸೇರಿದ ಆಸ್ತಿ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ದಾಖಲಾತಿಗಳನ್ನು ನಾನು ಹಾಜರುಪಡಿಸುತ್ತೇನೆ. 1 ಮತ್ತು 2 ನೇ ಪ್ರತಿವಾದಿಗಳ ತಾಯಿಯ ಹೆಸರು ಬಂದಮ್ಮ ಎಂದರೆ ನಿಜ. ಸದರಿ ಬಂದಮ್ಮ ರವರ ತಂದೆಯ ಹೆಸರು ಶಂಕರಣ್ಣ ಯಾನೇ ಸಿದ್ದಣ್ಣ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಶಂಕರಣ್ಣ ಯಾನೇ ಸಿದ್ದಣ್ಣ ರವರಿಗೆ ಪ್ರತಿವಾದಿಗಳ ತಾಯಿ ಬಂದಮ್ಮ ಒಬ್ಬಳೇ ಮಗಳು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಶಂಕರಣ್ಣ ಯಾನೇ ಸಿದ್ದಣ್ಣ ರವರು ದಿನಾಂಕ 04.02.1957 ರಲ್ಲಿ ದಾವಾ ಎ ಶೆಡ್ಯೂಲ್ ನ ಐಟಂ ನಂ.1 ರಿಂದ 3 ಆಸ್ತಿಗಳನ್ನು ಶ್ರೀಮತಿ ದುರ್ಗಾ ಬಾಯಿ ಕೋಂ ಭವಾನಿ ರವ್ ರವರಿಂದ 1 ನೇ ಪ್ರತಿವಾದಿಯವರ ಹೆಸರಿಗೆ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ದಾಖಲೆ ಕೊಡುತ್ತೇನೆ ಎಂದು ಉತ್ತರ ನೀಡಿರುತ್ತಾರೆ. ಮೇಲೆ ಹೇಳಿದಂತೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಎ ಶೆಡ್ಯೂಲ್ ನ ಐಟಂ ನಂ.1 ರಿಂದ 3 ಆಸ್ತಿಗಳು ಖರೀದಿಸಿದ

ಕಾರಣ ಸದರಿ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ಹೇಳಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಡುತ್ತೇನೆ.

9. ದಾವಾ ಎ ಶೆಡ್ಯೂಲ್ ನ ಐಟಂ ನಂ.1 ರಿಂದ 3 ನೇ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುವುದರಿಂದ 2 ನೇ ಪ್ರತಿವಾದಿಗಾಗಲೀ ಅಥವಾ ಸದರಿ ಶಂಕರಮ್ಮ ರವರಿಗಾಗಲೀ ಸದರಿ ಸ್ವತ್ತುಗಳಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸದರಿ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ.

10. ದಾವಾ ಬಿ ಶೆಡ್ಯೂಲ್ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಿ ಎಂದರೆ ಅಗತ್ಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ದಾವಾ ಎ ಶೆಡ್ಯೂಲ್ ನ 4 ಮತ್ತು 5 ನೇ ಸ್ವತ್ತುಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ನಿಜ. 2 ನೇ ಪ್ರತಿವಾದಿ ಅವರ ತಂದೆಯಾದ ಎಸ್.ಬಿ. ಬಸವಣ್ಯಪ್ಪ ರವರು ಮೃತಪಟ್ಟ ನಂತರ ದಾವಾ ಎ ಶೆಡ್ಯೂಲ್ ನ 4 ಮತ್ತು 5 ನೇ ಸ್ವತ್ತುಗಳು ಸದರಿಯವರ ಹೆಸರಿಗೆ ಮಾಡಿಸಲು 1985 ರಲ್ಲಿ ಅರ್ಜಿ ಕೊಟ್ಟಿದ್ದರು ಎಂದರೆ ನಿಜ. ನಾನು ಮುಂದುವರೆದು ಹೇಳುವುದೇನೆಂದರೆ ನನ್ನ ಅಜ್ಜಿ ಕರಿಬಸಮ್ಮ ರವರು ಸಹ ಸದರಿಯವರ ಹೆಸರಿಗೆ ಸದರಿ ಸ್ವತ್ತುಗಳನ್ನು ಮಾಡಲು ಅರ್ಜಿ ಕೊಟ್ಟಿದ್ದರು. ದಿನಾಂಕ 24.03.1995 ರಂದು ನನ್ನ ಅಜ್ಜಿ ಕರಿಬಸಮ್ಮ ರವರು ಸದರಿ ಐಟಂ ನಂ. 4 ಮತ್ತು 5 ಸ್ವತ್ತನ್ನು 2 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಬಾರದು ಎಂದು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ನಿಜ. 1995 ರಲ್ಲಿ ನನ್ನ ಅಜ್ಜಿ ಕರಿಬಸಮ್ಮ ಸದರಿಯವರು ಪ್ರತಿವಾದಿಗಳ ತಂದೆ ಬಸವಣ್ಯಪ್ಪ ರವರ ಹೆಂಡತಿ ಮತ್ತು ನನ್ನ ತಾಯಿ ಸಂಗಮ್ಮ ರವರು ಬಸವಣ್ಯಪ್ಪ ರವರ ವಾರಸುದಾರರು ಎಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನಿಜ. 1997 ರಲ್ಲಿ ಕಂದಾಯ ಅಧಿಕಾರಿಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಐಟಂ 4 ಮತ್ತು 5 ಸ್ವತ್ತುಗಳ ದಾಖಲೆಗಳನ್ನು ವರ್ಗಾವಣೆ ಮಾಡಲು ಆದೇಶ ಮಾಡಿರುತ್ತಾರೆ ಎಂದರೆ ನಿಜ. 1997 ರಲ್ಲಿ ಆದ ಆದೇಶದ ಬಗ್ಗೆ ನಾನಾಗಲೀ, ನನ್ನ ಅಜ್ಜಿ ಕರಿಬಸಮ್ಮ ರಾಗಲೀ ಅಥವಾ

ನನ್ನ ತಾಯಿ ಸಂಗಮ್ಮ ರವರಾಗಲೀ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತಿರಾ ಎಂದರೆ ನಾವು ಸದರಿ ಕಾಲಕ್ಕೆ ಚೆನ್ನಾಗಿ ಇದ್ದ ಕಾರಣ ಆದೇಶವನ್ನು ಪ್ರಶ್ನಿಸಿರುವುದಿಲ್ಲ.

11. ನನ್ನ ಅಜ್ಜಿ ಕರಿಬಸಮ್ಮ ರವರು ಪ್ರತಿವಾದಿಯರ ತಂದೆಯ ವಿರುದ್ದ ಸದರಿಯವರಿಗೆ ಅಥವಾ ನನ್ನ ತಾಯಿ ಸಂಗಮ್ಮ ರವರಿಗಾಗಲೀ ಜೀವನಾಂಶ ಕೋರಿ ನ್ಯಾಯಾಲಯದಲ್ಲಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನನ್ನ ಅಜ್ಜಿ ಕರಿಬಸಮ್ಮ ರವರು ಪ್ರತಿವಾದಿಯ ತಂದೆಯ ವಿರುದ್ದ ಸದರಿ ಕರಿಬಸಮ್ಮ ರವರು ಸದರಿಯವರ ಹೆಂಡತಿ ಎಂದು ಘೋಷಣೆ ಮಾಡಲು ಸದರಿ ಪ್ರತಿವಾದಿಯರ ತಂದೆಯ ಜೀವಿತ ಕಾಲದಲ್ಲಿ ಯಾವುದೇ ವ್ಯಾಜ್ಯ ಹೂಡಿರುತ್ತಾರಾ ಎಂದರೆ ನನ್ನ ಅಜ್ಜಿ ಅಷ್ಟೊಂದು ವಿಧ್ಯಾವಂತರಾಗಿರಲಿಲ್ಲ. ನನ್ನ ಅಜ್ಜಿ ವಿಧ್ಯಾವಂತರಾದ ಕಾರಣ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನೌಖರಿ ಪಡೆದಿರುತ್ತಾರೆ ಎಂದರೆ ನನ್ನ ಅಜ್ಜಿ ಶಿಶು ವಿಹಾರದಲ್ಲಿ ಕೆಲಸ ಮಾಡುತ್ತಿದು ತದನಂತರ ಸರ್ಕಾರವು ನನ್ನ ಸಜ್ಜಿಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನೌಖರಿಗೆ ನೇಮಕ ಮಾಡಿರುತ್ತದೆ. 1995 ರಲ್ಲಿ ನನ್ನ ಅಜ್ಜಿ ತಕಾರಾರು ಅರ್ಜಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯದಲ್ಲಿ ಸದರಿಯವರು ಪ್ರತಿವಾದಿಗಳ ತಂದೆಯ ಹೆಂಡತಿ ಎಂದು ವ್ಯಾಜ್ಯ ಸಲ್ಲಿಸಿರುತ್ತಾರಾ ಎಂದರೆ ಈ ವ್ಯಾಜ್ಯವನ್ನು ಸಲ್ಲಿಸಿರುತ್ತಾರೆ. ಈ ವ್ಯಾಜ್ಯದಲ್ಲಿ ಸದರಿ ಕರಿಬಸಮ್ಮ ರವರು ಪ್ರತಿವಾದಿಗಳ ತಂದೆಯ ಹೆಂಡತಿ ಎಂದು ಕೇಳಿ ಘೋಷಣಾತ್ಮಕ ಪರಿಹಾರ ಕೇಳಿರುತ್ತಿರಾ ಎಂದರೆ ಸಾಕ್ಷಿ ಉತ್ತರಿಸಿರುವುದಿಲ್ಲ.

12. ದಾವಾ ಎ ಶೆಡ್ಯೂಲ್ ನ ಐಟಂ ನಂ.1 ರಿಂದ 3 ನೇ ಆಸ್ತಿಗಳು ಸದರಿ ಬಸವಣ್ಯಪ್ಪ ರವರ ಪಿತ್ರಾರ್ಜಿತ ಆಸ್ತಿ ಎಂದು ಘೋಷಣೆ ಮಾಡುವಂತೆ ಪರಿಹಾರ ಕೇಳಿರುತ್ತಿರಾ ಎಂದರೆ ಘೋಷಣೆ ಮಾಡುವ ಅವಶ್ಯಕತೆ ಇರುವುದಿಲ್ಲ. ವಾದಿ ಕರಿಬಸಮ್ಮ ರವರಿಗೂ ಹಾಗೂ ಪ್ರತಿವಾದಿಗಳ ತಂದೆ ಎಸ್. ಬಿ. ಬಸವಣ್ಯಪ್ಪ ರವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸದರಿ ಸಂಬಂಧದ ಬಗ್ಗೆ ದಾಖಲಾತಿಗಳ ಮುಖಾಂತರ ನಾನು ಪುರಾವೆ ಮಾಡುತ್ತೇನೆ. ದಾವಾ ಆಸ್ತಿಗೂ ವಾದಿ ಕರಿಬಸಮ್ಮ ರವರಿಗೂ ಅಥವಾ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು. ಪ್ರತಿವಾದಿಗಳ

ತಂದೆ ಹೆಸರು ಬಸವಣ್ಯಪ್ಪ ಎಂದು ಇರುವುದನ್ನು ದುರುಪಯೊಗಪಡಿಸಿ ಸುಳ್ಳು ವ್ಯಾಜ್ಯವನ್ನು ಹೂಡಿರುತ್ತೇನೆ ಎಂದರೆ ಸುಳ್ಳು. ನಿಪಿ 6 ವಂಶವೃಕ್ಷವನ್ನು ಸುಳ್ಳು ಪ್ರಮಾಣ ಪತ್ರ ನೀಡಿ ಪಡೆದುಕೊಂಡಿರುತ್ತೇನೆ ಎಂದರೆ ಸುಳ್ಳು. ದಾವಾ ಎ ಶೆಡ್ಯೂಲ್ ನ 1 ರಿಂದ 3 ನೇ ಸ್ವತ್ತನ್ನು 1 ನೇ ಪ್ರತಿವಾದಿ ಪ್ರಾಪ್ತವಯಸ್ಕನಾದ ನಂತರ ಇವರೆಗೂ ಸದರಿಯವರೇ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ನಿಜ. 1997 ರಿಂದ 2 ನೇ ಪ್ರತಿವಾದಿಯು ದಾವಾ ಎ ಶೆಡ್ಯೂಲ್ ನ 4 ಮತ್ತು 5 ನೇ ಆಸ್ತಿಗಳನ್ನು ವಹಿವಾಟು ವ್ಯವಹಾರ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ನಿಜ. ಪ್ರತಿವಾದಿಗಳು ದಾವಾ ಸ್ವತ್ತುಗಳನ್ನು ವಹಿವಾಟು ಮತ್ತು ಅನುಭೋಗ ಮಾಡುತ್ತಿರುವುದನ್ನು ನನ್ನ ಅಜ್ಜಿ ಕರಿಬಸಮ್ಮ ಅಥವಾ ನಾನಾಗಲೀ ಈ ದಾವೆ ಹೂಡುವವರೆಗೂ ಯಾವುದೇ ತಕರಾರನ್ನು ಮಾಡಿರುವುದಿಲ್ಲ ಎಂದರೆ ಈ ದಾವೆಯನ್ನು ಹೂಡಿರುತ್ತೇನೆ. ವಾದ ಪತ್ರದಲ್ಲಿ ವಿವರಿಸಿದ ಉಲ್ಲೇಖಗಳು ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ಅಂಶಗಳು ಸತ್ಯಕ್ಕೆ ದೂರವಾಗಿರುತ್ತದೆ ಎಂದರೆ ಸುಳ್ಳು. ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಪಡೆಯಲು ನಾನು ಅರ್ಹನಲ್ಲ ಎಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು).**

**ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿವಿಲ್ ನ್ಯಾಂ ಮತ್ತು ಜೆ ಎಂ ಎಫ್ ಸಿಃ ಸೊರಬ**